<u>ದಿನಾಂಕ 30.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

**<u>ಪಾಟೀ ಸವಾಲುಃ 1ನೇ ಎದುರುದಾರರ ಪರ ಮಾನ್ಯ ವಕೀಲರಿಂದ .</u>**

ನಾನು ನಿಪಿ 1 ಮತ್ತು 2 ಅನ್ನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ 1 ರಲ್ಲಿ ಹರಿಹರನ್ ಎಂಬುವವರು ಕೆಎ-04-ಕೆವೈ-7908 ಸಂಖ್ಯೆಯ ವಾಹನವನ್ನು ಚಾಲನೆ ಮಾಡುತ್ತಿದ್ದ ಬಗ್ಗೆ ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ವಿಚಾರ ಸರಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 1 ರಲ್ಲಿ ಸದರಿ ವ್ಯಕ್ತಿ ಅತೀವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿಕೊಂಡು ಬಂದು ವಿರೇಶ್ ರವರಿಗೆ ಡಿಕ್ಕಿಪಡಿಸಿದ ಪರಿಣಾಮ ಅಪಘಾತ ಉಂಟಾಗಿ, ಹರಿಹರನ್ ಮತ್ತು ವಿರೇಶ್ ರವರಿಗೆ ಗಾಯಗಳು ಆದ ಬಗ್ಗೆ ನಮೂದು ಇದೆ ಎಂದರೆ ಸಾಕ್ಷಿಯು ಸದರಿ ದಾಖಲಾತಿಯನ್ನು ನಾನು ಓದಿ ತಿಳಿದುಕೊಂಡಿಲ್ಲ, ಆ ಬಗ್ಗೆ ಈಗ ತಿಳಿದು ಬಂದಿದೆ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಅಪಘಾತದ ಬಗ್ಗೆ ಮಾಹಿತಿ ಇರುವುದಾಗಿ ತಿಳಿಸಿರುತ್ತೇನೆ ಎಂದರೆ ಸರಿ. ಕೆಎ-04-ಕೆವೈ-7908 ಸಂಖ್ಯೆಯ ವಾಹನ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತವಾದ ಸಮಯದಲ್ಲಿ ಬೇರೆ ವಾಹನದಲ್ಲಿ ಹೋಗುತ್ತಿದ್ದು, ಅದು ನನ್ನ ಸ್ನೇಹಿತನಿಗೆ ಸೇರಿದ್ದು, ಅದರ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಹೋಗುತ್ತಿದ್ದ ಬೈಕನ್ನು ನಾನೇ ಚಾಲನೆ ಮಾಡುತ್ತಿದ್ದೆ.

ಕೆಎ-04-ಕೆವೈ-7908 ಸಂಖ್ಯೆಯ ವಾಹನವನ್ನು ನಾನೇ ಚಾಲನೆ ಮಾಡುತ್ತಿದ್ದು, ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಕೆಎ-04-ಕೆವೈ-

7908 ಸಂಖ್ಯೆಯ ವಾಹನ ಯಾರಿಗೆ ಸೇರಿದ್ದು ಎಂಬುದು ನನಗೆ ಗೊತ್ತಿಲ್ಲ. ಕೆಎ-04-ಕೆವೈ-7908 ಸಂಖ್ಯೆಯ ವಾಹನಕ್ಕೆ ವಿಮೆ ಇಲ್ಲದೇ ಇರುವ ಕಾರಣ ಕೆಎ-03-ಹೆಚ್.ಎಕ್ಸ್-5051 ಸಂಖ್ಯೆಯ ವಾಹನವನ್ನು ಸುಳ್ಳಾಗಿ ಸೇರ್ಪಡೆ ಮಾಡಲಾಗಿದೆ ಎಂದರೆ ಸರಿಯಲ್ಲ. ಆಪಾದಿತ ವಾಹನ ನನಗೆ ಸೇರಿದ್ದು. ವಾಸ್ತವವಾಗಿ ಅಪಘಾತಪಡಿಸಿದ ವಾಹನಕ್ಕೆ ಸೂಕ್ತ ದಾಖಲಾತಿಗಳು ಇಲ್ಲದೇ ಇರುವ ಕಾರಣ ನನಗೆ ಸೇರಿದ ವಾಹನವನ್ನು ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳಾಗಿ ಸೇರ್ಪಡೆ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ವಾಹನದಿಂದ ಯಾವುದೇ ರೀತಿಯ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಅಪಘಾತಪಡಿಸಿದ ವಾಹನದ ಚಾಲಕನಿಗೆ ಸೂಕ್ತ ಪರವಾನಗಿ ಇಲ್ಲದೇ ಇದ್ದ ಕಾರಣ ಹರಿಹರನ್ ಎಂಬಾತ ನನ್ನ ವಾಹನವನ್ನು ಚಾಲನೆ ಮಾಡುತ್ತಿದ್ದ ಮತ್ತು ಆತನ ತಪ್ಪಿ ನಿಂದ ಅಪಘಾತವಾಗಿದೆ ಎಂದು ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

ಕೆಎ-04-ಕೆವೈ-7908 ಸಂಖ್ಯೆಯ ವಾಹನ ಅಪಘಾತದಲ್ಲಿ ಭಾಗಿಯಾಗದೇ ಇದ್ದಲ್ಲಿ ಪೊಲೀಸರಿಗೆ ಮರು ದೂರನ್ನು ನೀಡುತ್ತಿದ್ದೆ ಎಂದರೆ ಸಾಕ್ಷಿಯು ಸದರಿ ವಾಹನ ಯಾವುದು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾಸ್ತವವದಲ್ಲಿ ಅಪಘಾತಪಡಿಸಿದ ವಾಹನದ ಮಾಲೀಕರನ್ನು ರಕ್ಷಿಸುವ ಉದ್ದೇಶದಿಂದ ನನ್ನ ವಾಹನದಿಂದಲೇ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ ಕಾರಣ ಪೊಲೀಸರೊಂದಿಗೆ ಶಾಮೀಲಾಗಿ ಅಪಘಾತದ ವಿಚಾರವನ್ನು ವಿಮಾ ಕಂಪನಿಯವರಿಗೆ ತಿಳಿಸಲಿಲ್ಲ ಎಂದರೆ ಸರಿಯಲ್ಲ. ಆಪಾದಿತ ವಾಹನ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಸಂಬಂಧಪಟ್ಟ ಪೊಲೀಸರನ್ನು ವಿಚಾರಣೆಗೆ

ಒಳಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಅರ್ಜಿದಾರರಿಗೆ ಸಹಾಯ ಆಗಲೀ ಎಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ .</u>

ಅರ್ಜಿದಾರರು ರಸ್ತೆಯನ್ನು ದಾಟುತ್ತಿದ್ದ ಸಮಯದಲ್ಲಿ ಅಪಘಾತವಾಗಿದೆ ಎಂದರೆ ಸರಿ, ಆದರೆ ಅಲ್ಲಿ ಯಾವುದೇ ಬಿಳಿ ಪಟ್ಟಿಗಳು ಇರಲಿಲ್ಲ ಎಂದು ನುಡಿಯುತ್ತಾರೆ. ಅಪಘಾತವಾದ ರಸ್ತೆಯಲ್ಲಿ ಬಿಳಿ ಪಟ್ಟಿಗಳು ಇದ್ದ ಬಗ್ಗೆ ನಾಕಶೆಯಲ್ಲಿ ನಮೂದು ಇದೆ ಎಂದರೆ ಸರಿ. ಹರಿಹರನ್ ರವರ ತಪ್ಪಿ ನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅರ್ಜಿದಾರರ ತಪ್ಪಿ ನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಪ್ರಶ್ನೆಃ ಹರಿಹರನ್ ಮತ್ತು ವಿರೇಶ್ ನಿಮ್ಮ ಸ್ನೇಹಿತರಾ?

ಉತ್ತರಃ ಹರಿಹರನ್ ನನ್ನ ಸ್ನೇಹಿತ, ಆದರೆ ವಿರೇಶ್ ರವರ ಪರಿಚಯ ನನಗೆ ಇಲ್ಲ.

ಪ್ರಶ್ನೆಃ ಹರಿಹರ್ ರವರೊಂದಿಗೆ ಯಾರಾದರೂ ಪ್ರಯಾಣಿಸುತ್ತಿದ್ದರಾ?

ಉತ್ತರಃ ಹೌದು, ಭರಣಾ ಬಾಸ್ ಎಂಬುವವರು ಇದ್ದರು.

ಪ್ರಶ್ನೆಃ ನಿಮ್ಮೊಂದಿಗೆ ಯಾರಾದರೂ ಪ್ರಯಾಣಿಸುತ್ತಿದ್ದರಾ?

ಉತ್ತರಃ ಹೌದು, ರಿತ್ವಿಕ್ ಎಂಬುವವರು ಇದ್ದರು.

ಪ್ರಶ್ನೆಃ ನಿಮಗೆ ಪೊಲೀಸರಿಗೆ ಅಪಘಾತದ ಬಗ್ಗೆ ಮಾಹಿತಿ ನೀಡಲು ತೊಂದರೆ ಇತಾ?

ಉತ್ತರಃ ಇಲ್ಲ.

ಪ್ರಶ್ನೆಃ ಕೆಎ-04-ಕೆವೈ-7908 ಸಂಖ್ಯೆಯ ವಾಹನವನ್ನು ಹರಿಹರನ್ ರವರು ಚಾಲನೆ ಮಾಡುತ್ತಿರಲಿಲ್ಲ ಎಂದು ಪೊಲೀಸರ ಮುಂದೆ ಹೇಳಿದ್ದಾರಾ?

ಉತ್ತರಃ ನನಗೆ ಗೊತ್ತಿಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**
**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**